ಯಾವುದೇ ರೀತಿಯಲ್ಲಿ ಪತ್ತೆಯದಂಥ ಪರಿಸ್ಥಿತಿ ಇಲ್ಲ. ಆ ಪ್ರದೇಶದಲ್ಲಿ ಒಂದು ರೀತಿಯ ಟೆನ್ಷನ್ ಡೆವಲಪ್ ಆಗಿದೆ. ಅವಳ ತಂದೆತಾಯಿಗಳಿಗೆ ಬಹಳ ತೊಂದರೆಯಾಗಿದೆ. ಅದು ಹೀಗೂ ಆಗಿರಬಹುದು. ಅಲ್ಲಿಂದ ಅವಳನ್ನು ಬೊಂಬಾಯಿ ಅಥವಾ ಮತ್ತೊಂದು ಕಡೆಗೆ ಸಾಗಿಸಿರಬಹುದು. ಕೆಲಸ ಮಾಡುತ್ತಿದ್ದ ತನ್ನ ತಾಯಿಯಿಂದ ಸ್ವಲ್ಪ ಅಂತರದಲ್ಲಿದ್ದಂಥ ಆ ಹೆಣ್ಣು ಮಗಳನ್ನು ಯಾವ ರೀತಿ ಎತ್ತಿಕೊಂಡು ಹೋಗಿದ್ದಾರೋ ಗೊತ್ತಿಲ್ಲ. ಅದಷ್ಟು ಬೇಗ ಶೋಧನೆ ಮಾಡಿ ಅವಳ ತಂದೆತಾಯಿಗಳಿಗೆ ಒಪ್ಪಿಸುವಂಥ ಕೆಲಸ ಮಾಡಬೇಕು. ದೂರದವರೆಗೆ ಒಯ್ದಿರುವ ಅವಕಾಶಗಳೂ ಇರಬಹುದೆಂದು ಹೇಳುತ್ತೇನೆ. ಅವಳನ್ನು ಆದಷ್ಟು ಬೇಗ ಪತ್ತೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಹೇಳಿರುವುದನ್ನು ಈಗಾಗಲೇ ತಮ್ಮ ಗಮನಕ್ಕೂ ತಂದಿದ್ದಾರೆ. ತಮ್ಮ ಮುಖಾಂತರ ನನಗೆ ಪತ್ರ ಸಿಕ್ಕಿದೆ. ಅದರ ಮೇಲೆ ಈಗಾಗಲೇ ಕಾರ್ಯಕ್ರಮ ಜರುಗಿಸಿದ್ದೇವೆ ಅವಳು ಎಲ್ಲಿದ್ದಾಳೆ ಎನ್ನುವ ಬಗ್ಗೆ ಹುಡುಕಾಟ ನಡೆದಿದೆ. ನಮಗೆ ಮಾಹಿತಿ ಬಂದ ತಕ್ಷಣ ಅವರಿಗೆ ಉತ್ತರವನ್ನು ಕಳುಹಿಸಿಕೊಡುತ್ತೇವೆ.

(ಇ) ಮಂಗಳೂರಿನಲ್ಲಿರುವ ಸರ್ಕಾರಿ ಜಿಲ್ಲಾ ಆಸ್ಪತ್ರೆಯಾದ ಲೇಡಿ ಗೋಷನ್ ಆಸ್ಪತ್ರೆಗೆ ವಿದ್ಯುತ್ ಸರಬರಾಜು ಕುರಿತು

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವಂಥ ಸರ್ಕಾರೀ ಜಿಲ್ಲಾ ಆಸ್ಪತ್ರೆಯಾದ ಲೇಡಿ ಗೋಷನ್ ಆಸ್ಪತ್ರೆಗೆ ಸಂಬಂಧಪಟ್ಟಂತೆ 70 ಲಕ್ಷ ರೂಪಾಯಿಗಳ ಬಿಲ್ಲನ್ನು ಕಟ್ಟಬೇಕು. ಇಲ್ಲದಿದ್ದರೆ ವಿದ್ಯುತ್ ಸರಬರಾಜನ್ನು ಡಿಸ್‌ಕನೆಕ್ಷನ್ ಮಾಡಲಾಗುವುದು ಎಂದು ಕೆ.ಪಿ.ಟಿ.ಸಿ.ಎಲ್. ಕಡೆಯಿಂದ ಆರ್ಡರ್ ಹೋಗಿದೆ. ಇದರಿಂದ ಒಂದು ಸೇವಾಸಂಸ್ಥೆಗೆ ದೊಡ್ಡ ಅನ್ಯಾಯವಾಗುತ್ತದೆ. ಹಾಗೂ ಸಾವಿರಾರು ರೋಗಿಗಳಿಗೆ, ಅದರಲ್ಲೂ ವಿಶೇಷವಾಗಿ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಮಧ್ಯೆ ಪ್ರವೇಶ ಮಾಡಬೇಕು. ಕಳೆದ ಹಲವು ವರ್ಷಗಳಲ್ಲಿ ಅಲ್ಲಿಗೆ ಹೊಸ ಹೊಸ ಫ್ಯಾಕಲ್ಟೀಸ್ ಬಂದ ಕಾರಣ ಲೋಡ್ ಜಾಸ್ತಿಯಾಗಿ ಕನ್‌ಸಂಪ್ಷನ್ ಹೆಚ್ಚು ಮಾಡುತ್ತಾ ಹೋಯಿತು. ಇಲ್ಲಿ ಏನಾಗಿದೆ ಎಂದರೆ ಸಂಬಂಧಪಟ್ಟ ಇಂಜೀನಿಯರ್ ರಿನ್ಯೂಯಲ್ ಮಾಡಲು ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಉಂಟಾಗಿರುವಂಥ ಸಮಸ್ಯೆ ಇದು. ಆ ಆಸ್ಪತ್ರೆಯ ಅಧಿಕಾರಿಗಳು ಅಥವಾ ಡಾಕ್ಟರ್‌ಗಳು ಏನೂ ಮಾಡಿಲ್ಲ. ಆ 70 ಲಕ್ಷದಲ್ಲಿ ಪೆನಾಲ್ಟಿಯೇ ಸುಮಾರು 30 ಲಕ್ಷಕ್ಕಿಂತಲೂ ಜಾಸ್ತಿ ಇದೆ. ಆದ್ದರಿಂದ ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಿ 17 ಲಕ್ಷ ರೂಪಾಯಿಗಳನ್ನು ಮಾತ್ರ ಕಟ್ಟುವಂತಾಗಬೇಕು. ಏಕೆಂದರೆ ಅವರು 17 ಲಕ್ಷ ರೂಪಾಯಿಗಳ ಮೌಲ್ಯದಷ್ಟು ಇರುವ ಎಲೆಕ್ಟ್ರಿಸಿಟಿಯನ್ನು ಕನ್‌ಸ್ಯೂಮ್ ಮಾಡಿದ್ದಾರೆ. ಈಗಾಗಲೇ ಆ ಆಸ್ಪತ್ರೆಯಿಂದ 24 ಲಕ್ಷ ರೂಪಾಯಿಗಳ ಪೇಮೆಂಟ್ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಬಾಕಿ ಇರುವಂಥ ಹಣದಲ್ಲಿ ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಬೇಕು ಹಾಗೂ ಸರ್ಕಾರ ಈ ಬಗ್ಗೆ ತಕ್ಷಣ ನಿರ್ಣಯ ತೆಗೆದುಕೊಂಡು ಕೆ.ಪಿ.ಟಿ.ಸಿ.ಎಲ್.ಗೆ ಆದೇಶವನ್ನು ಕೊಡಬೇಕು ಎನ್ನುವ ವಿನಂತಿಯನ್ನು ತಮ್ಮ ಮೂಲಕ ಮಾಡಲು ಇಚ್ಛಿಸುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ಇದರಲ್ಲಿ ಎಷ್ಟು ಅಮೌಂಟ್ ಇನ್‌ವಾಲ್ವ್ ಆಗಿದೆಯೋ, ಎಷ್ಟು ಬಾಕಿ ಇದೆಯೋ ಅದು ನನಗೆ ಗೊತ್ತಿಲ್ಲ. ಈ ಬಗ್ಗೆ ಲೆಕ್ಕ ತಪಾಸಣೆ ಮಾಡಬೇಕಾಗುತ್ತದೆ. ಯಾವುದನ್ನು ಮನ್ನಾ ಮಾಡಬೇಕು ಯಾವುದನ್ನು ವಸೂಲು ಮಾಡಬೇಕು ಎನ್ನುವುದನ್ನು ನೋಡಬೇಕು. ಆ ವಿವರಗಳು ನಮ್ಮ ಹತ್ತಿರ ಇಲ್ಲ. ಅದು ಕೆ.ಪಿ.ಟಿ.ಸಿ.ಎಲ್‌ಗೆ ಸಂಬಂಧಪಟ್ಟದ್ದು ಅದನ್ನು ನಾನು ಅವರ ಗಮನಕ್ಕೆ ತರುತ್ತೇನೆ.

(ಈ) ಶಿವಮೊಗ್ಗ ಆಸ್ಪತ್ರೆ ಕಟ್ಟಡ ಕುರಿತು

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಆಸ್ಪತ್ರೆ ಕಟ್ಟಡಕ್ಕೆ 1987ನೇ ಇಸವಿಯಲ್ಲಿ ಹಿಂದಿನ ಮುಖ್ಯಮಂತ್ರಿಯವರಾದ ಬಂಗಾರಪ್ಪನವರು ಅಡಿಗಲ್ಲು ಹಾಕಿದ್ದರು. ಆಗ ಸ್ವಲ್ಪ ಹಣ ಬಿಡುಗಡೆಯಾಯಿತು. ಆದರೆ ಹಿಂದಿನ ಸರ್ಕಾರ ಅದಕ್ಕೆ ಸ್ವಲ್ಪವೂ ಹಣವನ್ನು ಕೊಡಲಿಲ್ಲ. ಈಗಾಗಲೇ ಆ ಕಟ್ಟಡ ಶೋಚನೀಯ ಸ್ಥಿತಿಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ಫೆಬ್ರವರಿ 20ನೇ ತಾರೀಖು ಕಟ್ಟಡವನ್ನು ವೀಕ್ಷಣೆ ಮಾಡಿದರು. ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದನ್ನು ತಮ್ಮ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆಯಾಗುವಾಗ ಇದಕ್ಕೆ ಉತ್ತರ ಸಿಗುತ್ತದೆ. ಈ ಜೀರೋ ಹವರ್‌ನಲ್ಲಿ ಯಾವಾಗ ಆ ಆಸ್ಪತ್ರೆ ಪ್ರಾರಂಭವಾಗುತ್ತದೆ ಎಂದು ಕೇಳುವುದರ ಅರ್ಜೆನ್ಸಿ ಇದೆಯೇ?

ಅಧ್ಯಕ್ಷರು : ಅದನ್ನು ಇಲ್ಲಿ ಮೆನ್‌ಷನ್ ಮಾಡದಿದ್ದರೆ ಅದರ ಅರ್ಜೆನ್ಸಿ ಹೊರಟು ಹೋಗುತ್ತದೆ ಎಂದು ಹೇಳುತ್ತಿದ್ದಾರಷ್ಟೇ!

ಶ್ರೀ ಡಿ.ಬಿ.ಚಂದ್ರೇಗೌಡ : ನಾನು ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ.

ಶ್ರೀ ಹೆಚ್.ಎಂ.ಚಂದ್ರಶೇಖರಪ್ಪ : ಇನ್ನೂ ಗ್ಲೂಕೋಸ್ ಸಪ್ಲೈ ಬಗ್ಗೆ ಹೇಳುವುದಾದರೆ ಗ್ಲೂಕೋಸ್ ಬರುವುದು ನಿಂತು ಹೋಗಿದೆ. ಆಸ್ಪತ್ರೆಯ ಕಟ್ಟಡ ಅಧೋಗತಿಗೆ ಬರುತ್ತಿದೆ. ಅಲ್ಲದೆ ಅಲ್ಲಿರುವ ಮೆಷಿನರಿಗಳು ಕೂಡ ಹಾಳಾಗುತ್ತಿವೆ. ಹೊಸದಾಗಿ ಗ್ಲೂಕೋಸ್ ಕೊಡುತ್ತಿಲ್ಲ ಹಳೆಯದು ಖಾಲಿಯಾಗಿದೆ. ಹೀಗಾದರೆ ರೋಗಿಗಳ ಕತೆ ಏನಾಗಬೇಕು? ಒಂದು ತಿಂಗಳಿಗೆ ಸುಮಾರು 15 ಸಾವಿರದಿಂದ 20 ಸಾವಿರ ಗ್ಲೂಕೋಸ್ ಬಾಟಲ್‌ಗಳು ಬೇಕಾಗುತ್ತದೆ. ಅಲ್ಲಿ ಯಾವುದೂ ಕೂಡ ಸಿಗುತ್ತಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳಾದಂಥ ಮಾನ್ಯ ಕಾಗೋಡು ತಿಮ್ಮಪ್ಪನವರು ಅದನ್ನು ಈಗಾಗಲೇ ವೀಕ್ಷಣೆ ಮಾಡಿದ್ದಾರೆ. ದಯವಿಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಉ) ಲಕ್ಕವಳ್ಳಿ ಅಭಯಾರಣ್ಯದಲ್ಲಿ ಆನೆಯ ಸಾವು.

ಶ್ರೀ ಬಿ.ಆರ್.ನೀಲಕಂಠಪ್ಪ (ತರೀಕೆರೆ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇವತ್ತು ಕೇಳುವುದು ಬೇಡ, ನಾಳೆ ಉತ್ತರ ಕೊಡುತ್ತೇನೆ ಇದನ್ನು ನಾಳೆಗೆ ಸೈನ್ ಮಾಡಿಕೊಂಡಿ ಎಂದು ಹೇಳಿದ್ದಾರೆ. ನಾಳೆ ಉತ್ತರ ಕೊಡುತ್ತೀರಾ?